		ಮಧ್ಯದ 10 ಗ್ರಾಮ ಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ	ಕ್ರಮ ಕೈಗೊಳ್ಳಲಾಗಿದೆ.

ಕೋಲಾರ ಜಿಲ್ಲೆ :

1	ಮಾಲೂರು	ಮಾರ್ಕಂಡೇಯ ಜಲಾಶಯ ದಿಂದ ಮಾಲೂರು ತಾಲ್ಲೂಕಿನ 184 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ	ಕಾಮಗಾರಿ ಪ್ರಗತಿಯಲ್ಲಿದೆ.

ಬಯಲು ಸೀಮೆ ಪ್ರದೇಶದಲ್ಲಿ ಕುಡಿಯುವ ನೀರು ಸಮಸ್ಯೆ

500 (762) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) : ಮಾನ್ಯ ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ. ಪರಮಶಿವಯ್ಯರವರ ವರದಿ ಆಧರಿಸಿ, ಬಯಲು ಸೀಮೆಯ ಪ್ರದೇಶಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು ನಡೆಸಿರುವ ಸಮೀಕ್ಷೆಯ ಇತ್ತೀಚಿನ ಪೂರ್ಣ ವರದಿಯ ಪ್ರತಿಯನ್ನು ನೀಡುವುದು;

ಆ) ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಸರ್ವ ಪಕ್ಷಗಳು, ರೈತರು ಹಾಗೂ ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆಯನಿವಾರಣೆ ಬಗ್ಗೆ ಇತ್ತೀಚೆಗೆ ಬಂದ್ ಮಾಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಬಯಲು ಸೀಮೆ ಪ್ರದೇಶದ ಜನರಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಡಾ॥ ಪರಮಶಿವಯ್ಯರವರು ಜಲಸಂಪನ್ಮೂಲ ಇಲಾಖೆಗೆ ವರದಿ ಸಲ್ಲಿಸಿದ್ದು ಪ್ರಶ್ನಿತ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಕುರಿತು, ಯೋಜನಾ ವರದಿ ತಯಾರಿಸಲು ದಿ: 4.3.2011

ರಂದು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಟೆಂಡರ್ ಪ್ರಕಟಣೆ ಹೊರಡಿಸಿದೆ. ಸದರಿ ವರದಿಯ ಉಥೃತ ಭಾಗ ಅಡಕ ಮಾಡಿದೆ.

ಆ) ಬಂದಿದೆ.

ಇ) ವಿಶ್ವ ಬ್ಯಾಂಕ್ ನೆರವಿನ 2ನೇ ಹಂತದ ವಿಸ್ತೃತ ಯೋಜನೆಯಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಸಮಸ್ಯಾತ್ಮಕ ಗ್ರಾಮಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಪ್ರಾಥಮಿಕ ಸರ್ವೆ ಪ್ರಕ್ರಿಯೆ ನಡೆದಿದೆ.

ಈಗಾಗಲೇ ಕೋಲಾರ ಜಿಲ್ಲೆಗೆ ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ರೂ.22.50 ಕೋಟಿ ಅಂದಾಜಿನ 2 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು 114 ಗ್ರಾಮಗಳನ್ನು ಆವರಿಸಲು ಮಂಜೂರು ಮಾಡಲಾಗಿದೆ. ಮಾಲೂರು ತಾಲ್ಲೂಕಿನ ಮಾರ್ಕಂಡೇಯ ಜಲಾಶಯ ಆಧಾರಿತ ರೂ.36.19 ಕೋಟಿ ಅಂದಾಜಿನ ಯೋಜನೆಯಡಿ 184 ಗ್ರಾಮಗಳನ್ನು ಆವರಿಸಲು ಯೋಜನೆ ಮಂಜೂರು ಮಾಡಲಾಗಿದೆ. ಸದರಿ ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿವೆ.

ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.33.92 ಕೋಟಿ ಅಂದಾಜಿನ 4 ಭೂಮಿಯ ಮೆಲ್ಮೈ ಜಲಮೂಲ ಆಧಾರಿತ ಪ್ರತ್ಯೇಕ ಯೋಜನೆಗಳನ್ನು ರೂಪಿಸಲಾಗಿದೆ. ಈ ಯೋಜನೆಗಳಿಂದ 244–ಸಮಸ್ಯಾತ್ಮಕ ಗ್ರಾಮಗಳಿಗೆ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆಯಾಗಲಿದೆ. ಇದಕ್ಕೆ ಪೂರಕವಾಗಿ BAIF ಸಂಸ್ಥೆ ಮುಖೇನ ಸಚೇತನ ಯೋಜನೆಯಡಿ ಮಳೆ ನೀರು ಕೊಯ್ಲು ವಿಧಾನ ಅಳವಡಿಸಿ, 26 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಡಾ॥ ಶ್ರೀ ಜಿ.ಎಸ್. ಪರಮಶಿವಯ್ಯರವರು ಜಲಸಂಪನ್ಮೂಲ ಇಲಾಖೆಗೆ ನೀಡಿರುವ ವರದಿಯ ಮುಖ್ಯಾಂಶಗಳು ಹಾಗೂ ವಸ್ತುಸ್ಥಿತಿ ಅಂಶಗಳು

ಶ್ರೀ ಜಿ.ಎಸ್.ಪರಮಶಿವಯ್ಯನವರು ಪಶ್ಚಿಮಾಭಿಮುಖವಾಗಿ ಹಾಗೂ ಪೂರ್ವಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ಒದಗಿಸಲು ಯೋಜನೆಯನ್ನು ರೂಪಿಸಿರುತ್ತಾರೆ.

ಸದರಿ ಯೋಜನೆಯ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಕೈಗೊಂಡು ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕೆಲಸವನ್ನು ಭಾರತ ಸರ್ಕಾರದ ಸ್ವಾಮ್ಯ ಸಂಸ್ಥೆಯಾದ ಮೆ: ಎನ್.ಆರ್. ಎಸ್.ಸಿ., ಹೈದ್ರಾಬಾದ್ ಇವರಿಗೆ ವಹಿಸಲು ದಿನಾಂಕ: 12–9–2003 ರಲ್ಲಿ ಕಾರ್ಯಪಾಲಕ ಇಂಜಿನಿಯರ್, ನಂ.1. ನೀರಾವರಿ ತನಿಖಾ ವಿಭಾಗ, ಮೈಸೂರು, ಇವರು ಮೆ: ಎನ್.ಆರ್.ಎಸ್.ಎ. ಸಂಸ್ಥೆ, ಹೈದರಾಬಾದ್ ಇವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತಾರೆ.

ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯು ALTM(Airborne Laser Terrain Mapping) ಹಾಗೂ Satellite ಸರ್ವೆ ಮಾಡುವ ಸಂಸ್ಥೆಯಾಗಿರುತ್ತದೆ. ಸದರಿ ಯೋಜನೆಯ ಮಾಲಾ ಕಾಲುವೆಗಳು ಪಶ್ಚಿಮ ಘಟ್ಟಗಳ ಇಳಿಜಾರಿನಲ್ಲಿ ಹಾದುಹೋಗುವುದರಿಂದ, ಸಾಂಪ್ರದಾಯಿಕವಾಗಿ ನಡೆಸುವ ಸಮೀಕ್ಷೆಯನ್ನು ಕೈಗೊಳ್ಳುವುದು ಕಠಿಣವಾದುದರಿಂದ ಈ ಕಾರ್ಯವನ್ನು ALTM ಮುಖಾಂತರ ನಡೆಸಲು ಮೆ:ಎನ್.ಆರ್.ಎಸ್.ಸಿ. ಸಂಸ್ಥೆಗೆ ವಹಿಸಿಕೊಡಲಾಗಿತ್ತು.

ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯವರು ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆಯನ್ನು ಕೈಗೊಂಡು 5ಮೀ. Contour interval ಇರುವ ನಕ್ಷೆಗಳ ಹಾಗೂ 1ಮೀ Contour interval ಇರುವ ನಕ್ಷೆಗಳ ಸಾಫ್ಟ್ ಪ್ರತಿಗಳನ್ನು ಒದಗಿಸಿರುತ್ತಾರೆ.

ಸದರಿ ಸಂಸ್ಥೆಯು ಈ ಯೋಜನೆಯ ಮಾಲಾ ಕಾಲುವೆಗಳ DEMs ಹಾಗೂ ORTHOS ಗಳ ಸಾಫ್ಟ್ ಪ್ರತಿಯನ್ನು ದಿನಾಂಕ: 14–09–2010 ರಂದು ಸಲ್ಲಿಸಿರುತ್ತಾರೆ.

ದಿನಾಂಕ: 25–10–2010ರ ಸರ್ಕಾರದ ಪತ್ರದಲ್ಲಿ ಒಡಂಬಡಿಕೆಯಲ್ಲಿ ಮೆ: ಎನ್.ಆರ್.ಎಸ್.ಸಿ. ಸಂಸ್ಥೆಗೆ ವಹಿಸಿಕೊಡಲಾದ ಸೇವಾ ಕಾಲುವೆಯ ಸಮೀಕ್ಷೆ ಕಾರ್ಯ ಹಾಗೂ ವಿವರವಾದ ಯೋಜನಾ ವರದಿಯ ತಯಾರಿಕಾ ಕಾರ್ಯವನ್ನು ಮೆ: ಎನ್.ಆರ್.ಎಸ್.ಸಿ. ಸಂಸ್ಥೆಯಿಂದ ಹಿಂಪಡೆದು ಅಲ್ಪಾವಧಿ ಟೆಂಡರ್ ಮುಖಾಂತರ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯು ಕ್ರಮ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

ದಿನಾಂಕ: 04–03–11ರಂದು ಸದರಿ ಯೋಜನೆಯ ವಿವರವಾದ ಯೋಜನಾ ವರದಿಯ ತಯಾರಿಕಾ ಕಾರ್ಯವನ್ನು ಕೈಗೊಳ್ಳಲು ಟೆಂಡರ್ ನೋಟಿಫಿಕೇಶನ್‌ನ್ನು ಹೊರಡಿಸಲಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ

501 (445) ಶ್ರೀ ನಾಡಗೌಡ ವೆಂಕಟರಾವ್ (ಏಂದನೂರು) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಶ್ವೇಚ್ಛಾಚಾರದಿಂದ ಅನಧಿಕೃತವಾಗಿ ಮದ್ಯ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಅನಧಿಕೃತವಾಗಿ ಮದ್ಯ ಮಾರಾಟ ಮಾಡುವುದರಿಂದ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ರೀತಿ ಅನಧೀಕೃತವಾಗಿ ಮದ್ಯ ಮಾರಾಟ ಮಾಡುವು ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿರುವುದು ನಿಜವೇ;

ಈ) ಈ ಅನಧಿಕೃತ ಮದ್ಯ ಮಾರಾಟದಿಂದ ಕಳ್ಳಭಟ್ಟಿಯನ್ನು ತಯಾರಿಸಿ ಅಧೀಕೃತ ಮದ್ಯದ ಜೊತೆಯಲ್ಲಿ ಸೇರಿಸಿ ಮಾರಾಟ ಮಾಡುವುದರಿಂದ ಸಾರ್ವಜನಿಕರ ಜೀವಹಾನಿಗೆ ದಾರಿ ಮಾಡಿದಂತಾ ಗುವುದಿಲ್ಲವೇ;

ಉ) ಈ ಅನಧಿಕೃತ ಮದ್ಯ ಮಾರಾಟಗಾರರ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಬಂದಿದೆ.

ಆ) ಅನಧಿಕೃತ ಮದ್ಯ ಮಾರಾಟ ಮಾಡುತ್ತಿದ್ದವರ ವಿರುದ್ಧ ಅಬಕಾರಿ ಕಾಯ್ದೆ, 1965 ರಡಿ ಮೊಕದ್ದಮೆಗಳನ್ನು ದಾಖಲಿಸಲಾಗುತ್ತಿದೆ. 2009–10ನೇ ಸಾಲಿನಲ್ಲಿ 2094 ಮೊಕದ್ದಮೆಗಳನ್ನು ದಾಖಲಿಸಿ, 1658 ಆರೋಪಿಗಳನ್ನು ಬಂಧಿಸಲಾಗಿರುತ್ತದೆ. 2010–11 ನೇ ಸಾಲಿನ (ಡಿಸೆಂಬರ್ ವರೆಗೆ) ಅಬಕಾರಿ ಕಾಯ್ದೆಯನ್ನು ಉಲ್ಲಂಘಿಸಿದವರ ಮೇಲೆ 1568 ಮೊಕದ್ದಮೆಗಳನ್ನು ಅಬಕಾರಿ ಕಾನೂನು ಜಾರಿ ಜೊತೆಗೆ ದಾಖಲಿಸಿ 1368 ಆರೋಪಿಗಳನ್ನು ಬಂಧಿಸಲಾಗಿರುತ್ತದೆ. ಗ್ರಾಮ ಮಟ್ಟದಲ್ಲಿನ ಸಾರ್ವಜನಿಕರು